ರಾಜ್ಯದಲ್ಲಿರುವ ಆಸ್ಪತ್ರೆಗಳ ಸ್ವಚ್ಛತೆ

1193. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿರುವ ಬಹುತೇಕ ಆಸ್ಪತ್ರೆಗಳು ಸ್ವಚ್ಛತೆ ಇಲ್ಲದೇ ಕೊಳೆತು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆ ಖಾಲಿ ಇವೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಂದಿಲ್ಲ

ಆ) 87 ಪ್ರಾಥಮಿಕ ಆರೋಗ್ಯ ಕೇಂದ್ರಗಳು.

ರೇಷ್ಮೆ ಗೂಡಿನ ಮಾರುಕಟ್ಟೆಗಳಿಂದ ವಸೂಲಾದ ಶುಲ್ಕ

1260. ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) :– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ ಮತ್ತು ಅವುಗಳು ಯಾವಾಗಿನಿಂದ ಸ್ಥಾಪಿಸಲ್ಪಟ್ಟಿವೆ ;

ಆ) ಮಾರುಕಟ್ಟೆಗಳು ಸ್ಥಾಪನೆಯಾದಂದಿನಿಂದ ಡಿಸೆಂಬರ್ 91ರ ಅಂತ್ಯದವರೆಗೆ ವಸೂಲಾಗಿರುವ ಮಾರುಕಟ್ಟೆ ಶುಲ್ಕ ಎಷ್ಟು ;
(ಕಳೆದ 5 ವರ್ಷಗಳಲ್ಲಿ ವಸೂಲಾದ ಮಾರುಕಟ್ಟೆಶುಲ್ಕ ವಿವರ ನಮೂದಿಸುವುದು)

ಇ) ಹೀಗೆ ಸಂಗ್ರಹವಾಗಿರುವ ಹಣದಲ್ಲಿ ರೇಷ್ಮೆ ಬೆಳೆಗಾರರಿಗೆ ವೆಚ್ಚ ಮಾಡಿರುವ ಹಣವೆಷ್ಟು ;

ಈ) ರೇಷ್ಮೆ ವಿನಿಮಯ ಕೇಂದ್ರ ಸ್ಥಾಪನೆಯಾದಂದಿನಿಂದ ಸಂಗ್ರಹವಾಗಿರುವ ಶುಲ್ಕ ಎಷ್ಟು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) –

ಅ) 61 ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಅನುಬಂಧ 1 ರಲ್ಲಿ ವಿವರ ಒದಗಿಸಿದದೆ.

ಆ) ರೂ. 5346.92 ಲಕ್ಷ ರೂ.ಗಳು ಅನುಬಂಧ 2 ರಲ್ಲಿ ವಿವರ ಒದಗಿಸಿದೆ.
ರೂ. 2775.820 ಲಕ್ಷ ರೂ.ಗಳು.

ಈ) ಈ ಹಣವನ್ನು ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ ಒಪ್ಪಿಗೆಯಾದ ಯೋಜನೆಗಳಿಗೆ ಖರ್ಚು ಮಾಡಲಾಗಿದೆ. ಇಲ್ಲಿಯವರೆವಿಗೆ ಖರ್ಚಾಗಿರುವ ಹಣ ರೂ.3003.08 ಲಕ್ಷ ರೂ.ಗಳು.

ಈ) ಸಂಗ್ರಹವಾಗಿರುವ ಶುಲ್ಕ ರೂ.2038.58 ಲಕ್ಷ ರೂ.ಗಳು.

ಅನುಬಂಧ - 1
ಜಿಲ್ಲಾವಾರು ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ಇರುವ ಸ್ಥಳ

ಜಿಲ್ಲೆ	ಮಾರುಕಟ್ಟೆ ಇರುವ ಸ್ಥಳ	ಜಿಲ್ಲೆ	ಮಾರುಕಟ್ಟೆ ಇರುವ ಸ್ಥಳ
ಬೆಂಗಳೂರು	1) ಬಾಗಲೂರು	ಮಂಡ್ಯ	1) ಮಂಡ್ಯ
	2) ಕನಕಪುರ		2) ಮಳವಳ್ಳಿ
	3) ಚನ್ನಪಟ್ಟಣ		3) ಶ್ರೀರಂಗಪಟ್ಟಣ
	4) ರಾಮನಗರಂ		4) ಕೆ.ಆರ್.ಪೇಟೆ
	5) ವಿಜಯಪುರ		